**ಪಾಠ–1** **ಮಾರ್ಚ್ 30–ಏಪ್ರಿಲ್ 5**

# ಜೀವನದ ಲಯಗಳು



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : ಆದಿಕಾಂಡ 1, ಆದಿಕಾಂಡ 8:22, ಕೀರ್ತನೆಗಳು 90:10; ಯೋಬ 1:13–19, ಅಪೋಸ್ತಲರ ಕೃತ್ಯಗಳು 9:1–22, ಫಿಲೇಮೋನನಿಗೆ 1:6; ರೋಮಾಪುರದವರಿಗೆ 8:1.

**ಸ್ಮರಣವಾಕ್ಯ : "ಪ್ರತಿಯೊಂದು ಕಾರ್ಯಕ್ಕೂ ಕಾಲವು ಕ್ಲುಪ್ತವಾಗಿದೆ; ಆಕಾಶದ ಕೆಳಗೆ ನಡೆಯುವ ಒಂದೊಂದು ಕೆಲಸಕ್ಕೂ ತಕ್ಕ ಸಮಯವುಂಟು" (ಪ್ರಸಂಗಿ 3:1).**

ಸೊಲೊಮೋನ ರಾಜನಿಂದ ಕೆಲವು ಅತ್ಯಂತ ಸುಂದರವಾದ ಕವಿತೆ ಸದಾ ಹೊರಹೊಮ್ಮಿದೆ. "ಪ್ರತಿಯೊಂದು ಕಾರ್ಯಕ್ಕೂ ಕಾಲವು ಕ್ಲುಪ್ತವಾಗಿದೆ; ಆಕಾಶದ ಕೆಳಗೆ ನಡೆಯುವ ಒಂದೊಂದು ಕೆಲಸಕ್ಕೂ ತಕ್ಕ ಸಮಯವುಂಟು ಹುಟ್ಟುವ ಸಮಯ, ಸಾಯುವ ಸಮಯ, ನೆಡುವ ಸಮಯ, ನೆಟ್ಟದ್ದನ್ನು ಕಿತ್ತುಹಾಕುವ ಸಮಯ, ಕೊಲ್ಲುವ ಸಮಯ, ಸ್ವಸ್ಥ ಮಾಡುವ ಸಮಯ, ಕೆಡವಿಬಿಡುವ ಸಮಯ, ಕಟ್ಟುವ ಸಮಯ, ಅಳುವ ಸಮಯ, ನಗುವ ಸಮಯ, ಗೋಳಾಡುವ ಸಮಯ, ಅಪ್ಪುವ ಸಮಯ, ಕಲ್ಲುಗಳನ್ನು ಚೆಲ್ಲುವ ಸಮಯ, ಕಲ್ಲುಗಳನು ಕೂಡಿಸುವ ಸಮಯ, ಅಪ್ಪುವ ಸಮಯ, ಅಪ್ಪದಿರುವ ಸಮಯ, ಗಳಿಸುವ ಸಮಯ, ಕಳೆಯುವ ಸಮಯ, ಕಾಪಾಡುವ ಸಮಯ, ಬಿಸಾಡುವ ಸಮಯ, ಹರಿಯುವ ಸಮಯ, ಮಾತಾಡುವ ಸಮಯ, ಪ್ರೀತಿಸುವ ಸಮಯ, ದ್ವೇಷಿಸುವ

ಸಮಯ, ಯುದ್ಧದ ಸಮಯ, ಸಮಾಧಾನದ ಸಮಯ– ಅಂತೂ ಒಂದೊಂದು ಕೆಲಸಕ್ಕೂ ತಕ್ಕ ಸಮಯವುಂಟು (ಪ್ರಸಂಗಿ 3:1–8).

ಈ ಮಾತುಗಳು ಮಾನವ ಬದುಕನ್ನು ಕುರಿತು ಹೆಚ್ಚಿನದನ್ನು ಸೆರೆಹಿಡಿಯುತ್ತದೆ– ಋತುಗಳು ಮತ್ತು ನಮ್ಮ ಜೀವನದ ಲಯಗಳು. ಹೌದು, ನಮ್ಮ ಜೀವನವು ಹಂತಗಳ ಮೂಲಕ, ಬದಲಾವಣೆಗಳ ಮೂಲಕ ಹಾದು ಹೋಗುತ್ತವೆ ಮತ್ತು ನಾವು ಹುಟ್ಟಿದ ಕ್ಷಣದಿಂದ ಅದು ಹಾಗೆ ಆಗುತ್ತವೆ. ಕೆಲವು ಸಮಯ ಬದಲಾವಣೆಗಳು ಒಳ್ಳೆಯದು, ಕೆಲವು ಸಮಯ ಇಲ್ಲ. ಈ ವಾಕ್ಯದಲ್ಲಿ ನಾವು ಕಾಲಗಳು ಮತ್ತು ಜೀವನದ ಲಯಗಳನ್ನು ಕುರಿತು ನೋಡೋಣ. ಅದರಲ್ಲೂ ಅವುಗಳು ವಿಶೇಷವಾಗಿ ನಮ್ಮ ಮತ್ತು ನಮ್ಮ ಕುಟುಂಬಗಳ ಮೇಲೆಯೂ ಪ್ರಭಾವ ಬೀರುತ್ತವೆ.

*** ಏಪ್ರಿಲ್ 6ರ ಸಬ್ಬತ್ತಿನ ಸಿದ್ಧತೆಗೆ ಈ ವಾರದ ಪಾಠ ಮತ್ತು ಅಧ್ಯಯನ ಮಾಡಿರಿ.**

**ಭಾನುವಾರ** **ಮಾರ್ಚ್ 31**

## ಆದಿಯಲ್ಲಿ

ಆದಿಯಲ್ಲಿ ಸತ್ಯವೇದ ಪ್ರಾರಂಭವಾಗುತ್ತದೆ. ಅದು ಏಕೆ ಆ ಪದಗಳೊಂದಿಗೆ ಆರಂಭವಾಗುತ್ತದೆ ಎಂಬುದು ಖಚಿತವಾಗಿಲ್ಲ (ನಿಜವಾಗಿಯೂ ಇಬ್ರಿಯ ಭಾಷೆಯಲ್ಲಿ ಒಂದೇ ಪದ) "ಆದಿಯಲ್ಲಿ" (ಆದಿಕಾಂಡ 1:1). ಅಧ್ಯಾಯದ ನಿರ್ದಿಷ್ಟ ಗಮನವು, ಸಹಜವಾಗಿ ಭೂಮಿಯು "ಕ್ರಮವಿಲ್ಲದೆಯೂ ಬರಿದಾಗಿಯೂ ಇತ್ತು" (ಆದಿಕಾಂಡ 1:2). ಇದ್ದಂತ ಸ್ಥಿತಿಯಿಂದ ಸ್ವತಃ ದೇವರು ತಾನೇ ರೂಪಾಂತರಿಸಿದರು. ಆರನೆಯ ದಿನದಲ್ಲಿ "ಬಹಳ ಒಳ್ಳೆಯದು" (ಆದಿಕಾಂಡ 1:31) ಎಂದು ದೇವರು ತಾನೇ ಘೋಷಿಸಿದರು. ಸಂಕ್ಷಿಪ್ತವಾಗಿ, ಇಲ್ಲಿ ಆದಿಯು ಪ್ರಪಂಚದ ಆರಂಭವಾಗಿದೆ.

**ಆದಿಕಾಂಡ 1ನ್ನು ಓದಿರಿ. ಆದಾಗ್ಯೂ ತುಂಬಾ ನಡೆಯುತ್ತಿದ್ದರೂ ಸ್ವತಃ ನೀವೇ ಪ್ರಶ್ನೆ ಕೇಳಿಕೊಳ್ಳಿ. ಅವಕಾಶ ಅಥವಾ ಅವಿಚಾರವಾದ ಯಾವುದಾದರೂ ಸುಳಿವು**

**ಇದೆಯೇ ಅಥವಾ ಎಲ್ಲವೂ ಸರಿಯಾದ ಸಮಯ ಮತ್ತು ಸ್ಥಳದಲ್ಲಿ ಬಹಳ ಕ್ರಮಬದ್ಧ ರೀತಿಯಲ್ಲಿ ಮಾಡಲಾಗಿದೆಯೇ? ದೇವರ ಗುಣವನ್ನು ಕುರಿತು ನಿಮ್ಮ ಉತ್ತರ ಏನೆಂದು ಹೇಳುತ್ತದೆ?**

ಎಲೆನ್ ಜಿ. ವೈಟ್‌ರವರು ಬರೆದರು "ಕ್ರಮವು ಪರಲೋಕದ ಪ್ರಥಮ ನಿಯಮ" (ಸೈನ್ಸ್ ಆಫ್ ದಿ ಟೈಮ್ಸ್, ಜೂನ್ 8, 1908) : ಸ್ಪಷ್ಟವಾಗಿ ಅದು ಭೂಮಿಯ ಮೇಲೆಯೂ ಪಾಪವು ನೈಸರ್ಗಿಕ ಪ್ರಪಂಚವನ್ನು ಒಡೆದರೂ ಸಹ ಸ್ವಲ್ಪಮಟ್ಟಕ್ಕೆ ಕ್ರಮ, ಲಯ ಮತ್ತು ಕ್ರಮಬದ್ಧತೆಯು ಇನ್ನೂ ಅಸ್ತಿತ್ವದಲ್ಲಿದೆ.

ಆದಿಕಾಂಡ 8:22 ಓದಿರಿ. ಕ್ರಮವನ್ನು ಹೇಗೆ ಇಲ್ಲಿ ಕಾಣಬಹುದು?

ಬೀಳುವಿಕೆಯ ನಂತರವೂ ಸಾಮಾನ್ಯವಾಗಿ ಋತುಗಳು ಕ್ರಮಬದ್ಧ ಶೈಲಿಯಲ್ಲಿ ಬರುತ್ತವೆ ಮತ್ತು ಹೋಗುತ್ತಾ ಇವೆ. ಆದ್ದರಿಂದ ಆಕಾಶದಲ್ಲಿರುವ ಬೆಳಕುಗಳೊಂದಿಗೆ (ಸೂರ್ಯ ಮತ್ತು ಚಂದ್ರ) ಅಂದರೆ "ರಾತ್ರಿಯಿಂದ ದಿನವನ್ನು ವಿಭಜಿಸಿ.... ಚಿಹ್ನೆಗಳು ಮತ್ತು ಋತುಗಳಿಗಾಗಿ ಹಾಗೂ ದಿನಗಳು ಮತ್ತು ವರ್ಷಗಳಿಗಾಗಿ" (ಆದಿಕಾಂಡ 1:14), ಋತುಗಳು ಅಲ್ಲದೆ ದೇವರು ಸೃಷ್ಟಿಸಿದ ವಿಶ್ವದ ಎಲ್ಲಾ ನೈಸರ್ಗಿಕ ಭಾಗವು ಲಯದಲ್ಲಿದೆ ಮತ್ತು ನಮಗೆ ಈಗ ಮಿನುಗು ನೋಟ ಮಾತ್ರ ಸಿಗುತ್ತದೆ. ನೂತನ ಆಕಾಶ ಮತ್ತು ನೂತನ ಭೂಮಿಗಳಲ್ಲಿ ಲಯಗಳ ಅರ್ಥವು ನಿಜಕ್ಕೂ ಅಸ್ತಿತ್ವದಲ್ಲಿದೆಯೆಂದು ಯೆಶಾಯ 66:23ರಲ್ಲಿರುವ ಒಂದು ವಾಕ್ಯವು ಸೂಚಿಸುತ್ತದೆ.

**ಸಬ್ಬತ್ತು, ಶಕ್ತಿಯುತವಾಗಿ ನಿಯಮಿತ ರೀತಿಯಲ್ಲಿ ನಿಮ್ಮ ಜೀವನವನ್ನು, ಅದರಲ್ಲೂ ವಿಶೇಷವಾಗಿ ನಿಮ್ಮ ಕುಟುಂಬ ಜೀವನದಲ್ಲಿ ಅದು ಹೇಗೆ ಪರಿಣಾಮ ಬೀರುತ್ತದೆ ಎಂಬುದರ ಬಗ್ಗೆ ಯೋಚಿಸಿ. ವಿಶಿಷ್ಟವಾದ ಅನುಕೂಲಗಳು ಯಾವುವು, ಕೇವಲ ಸಬ್ಬತ್ ದಿನವಲ್ಲ, ಆದರೆ ಅದು ಕ್ರಮಬದ್ಧವಾಗಿ ನಡೆಯುತ್ತದೆಯೇ?**

**ಸೋಮವಾರ** **ಏಪ್ರಿಲ್ 1**

## ಜೀವನದ ಲಯಗಳು

ವಿಜ್ಞಾನಿಗಳು ಮರುಕಳಿಸುವ ಲಯಗಳು ಎಂದು ಕರೆಯುವುದರ ಬಗ್ಗೆ

ಮಾತನಾಡುತ್ತಾರೆ. ಅದು ಜೈವಿಕ ಲಯಗಳಾಗಿವೆ ಎಂಬ ಕಲ್ಪನೆಯೂ ಇದೆ (ಕೆಲವೊಮ್ಮೆ "ಈ ದೇಹದ ಗಡಿಯಾರಗಳು" ಎಂದು ಕರೆಯುತ್ತಾರೆ). ಅದು ನಮ್ಮ ದೇಹದಲ್ಲಿ ಕಾರ್ಯಗಳನ್ನು ಕ್ರಮಪಡಿಸುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ನಮ್ಮ ದೇಹದಲ್ಲಿಯೇ ಕೆಲವು ನಿರ್ದಿಷ್ಟ ಕ್ರಮಬದ್ಧತೆಯು ಅಸ್ತಿತ್ವದಲ್ಲಿದೆ. ಹಾಗಾಗಿ, ಸ್ವಲ್ಪಮಟ್ಟಿಗೆ ಲಯಗಳು ನಮ್ಮ ಸುತ್ತಲೂ ಮತ್ತು ನಮ್ಮಲ್ಲಿಯೂ ಅಸ್ತಿತ್ವದಲ್ಲಿದೆ.

**ಕೆಳಗಿನ ಧರ್ಮಶಾಸ್ತ್ರದ ವಾಕ್ಯವೃಂದಗಳಲ್ಲಿ ಊಹಿಸಬಹುದಾದ ಜೀವನದ ಋತುಗಳು ಯಾವುವು ಮತ್ತು ಅವು ಹೇಗೆ ನೇರವಾಗಿ ಕುಟುಂಬ ಜೀವನಕ್ಕೆ ಕಟ್ಟಿದೆ?**

ಪ್ರಸಂಗಿ 3:2 ................................................................................

ಆದಿಕಾಂಡ 21:8 ನ್ಯಾಯಸ್ಥಾಪಕರು 13:24 ..................................

ಕೀರ್ತನೆಗಳು 71:5 ಜ್ಞಾನೋಕ್ತಿ 5:18 .......................................

ಕೀರ್ತನೆಗಳು 90:10 ..............................................................

ಜೀವನ ಪುಸ್ತಕದ ಎರಡು ಕೊನೆಗಳಾದ ಹುಟ್ಟು ಮತ್ತು ಸಾವಿನ ನಡುವೆ, ನಾವೆಲ್ಲರೂ ವಿವಿಧ ಋತುಗಳ ಮೂಲಕ ಹಾದು ಹೋಗುತ್ತೇವೆ. ಪ್ರತಿಯೊಬ್ಬರಿಗೂ ವಿಭಿನ್ನವಾಗಿದೆ. ಕೆಲವು ಮಕ್ಕಳು ಅವರ ಜೀವನದ ನಂತರ ಬಹುಕಾಲ ಬದುಕುವುದಿಲ್ಲ. ಇತರರು ವಯಸ್ಕರಾಗಿ ಬೆಳೆದು ಹಣ್ಣು ಮುದುಕರಾಗುವವರೆಗೂ ಜೀವಿಸುತ್ತಾರೆ. ಮಕ್ಕಳು ತಮ್ಮದೇ ಆದ ವೇಗದಲ್ಲಿ ಬೆಳೆಯುತ್ತಾರೆ ಮತ್ತು ಅಭಿವೃದ್ಧಿ ಹೊಂದುತ್ತಾರೆ. ಕೆಲವರು ಇತರರಿಗಿಂತ ಶೀಘ್ರವಾಗಿ ನಡೆಯುತ್ತಾರೆ ಮತ್ತು ಮಾತನಾಡುತ್ತಾರೆ. ಕೆಲವರು ಶಾಲೆಗೆ ಹಾಜರಾಗಿ ಮತ್ತು ವೃತ್ತಿಪರರಾಗಿ ಬೆಳೆಯುತ್ತಾರೆ. ಇತರರು ಬೇರೆ ಮಾದರಿಯ ಕೆಲಸಕ್ಕೆ ತಮ್ಮ ಸಮಯವನ್ನು ಸಮರ್ಪಿಸುತ್ತಾರೆ. ಕೆಲವರು ಕುಟುಂಬಗಳನ್ನು ಹೊಂದಿರುತ್ತಾರೆ ಮತ್ತು ಇತರರು ಎಂದಿಗೂ ಮದುವೆಯಾಗುವುದಿಲ್ಲ ಅಥವಾ ಮಕ್ಕಳನು ಹೊಂದಿರುವುದಿಲ್ಲ. ಭೂಮಿಯ ಮೇಲೆ ಶತಕೋಟಿ ಜನರು ಇದ್ದಾರೆ ಮತ್ತು ನಾವೆಲ್ಲರೂ ಹೆಚ್ಚು ಸಾಮಾನ್ಯರಾಗಿದ್ದೇವೆ (ಅಪೊಸ್ತಲರ ಕೃತ್ಯಗಳು 17:26ರನ್ನು ನೋಡಿ).

ಪ್ರತಿಯೊಬ್ಬರು ಒಬ್ಬ ವ್ಯಕ್ತಿಗಳಾಗಿದ್ದೇವೆ. ಹೀಗಾಗಿ ನಮ್ಮ ಪ್ರತಿಯೊಬ್ಬರ ಜೀವಿತದಲ್ಲಿ ಭಿನ್ನಾಭಿಪ್ರಾಯಗಳು ಉಂಟಾಗುತ್ತದೆ.

ಒಂದು ಅರ್ಥದಲ್ಲಿ ಕೂಡಾ ಈ ಭಿನ್ನಾಭಿಪ್ರಾಯಗಳು ಪ್ರಾಮುಖ್ಯವಾದುದು ಯಾಕೆಂದರೆ ಅವು ನಮ್ಮಲ್ಲಿ ಪ್ರತಿಯೊಬ್ಬರನ್ನು ವಿಶೇಷರನ್ನಾಗಿ ಮಾಡುತ್ತದೆ. ಇದರ ಅರ್ಥವೇನೆಂದರೆ ಇತರರಿಗೆ ಇಲ್ಲದ ಯಾವುದಾದರೊಂದು ನಮ್ಮಲ್ಲಿ ಪ್ರತಿಯೊಬ್ಬರಿಗೂ ಇರುತ್ತದೆ. ಸಂಕ್ಷಿಪ್ತವಾಗಿ, ನಮ್ಮ ಭಿನ್ನಾಭಿಪ್ರಾಯಗಳು ಇತರರಿಗೆ ಆಶೀರ್ವಾದವಾಗಲು ನಮ್ಮನ್ನು ಅನುಮತಿಸುತ್ತದೆ. "ಯುವಕರಿಗೆ ಒಲವು ಭೂಷಣ, ಮುದುಕರಿಗೆ ನರೆಯು ಒಡವೆ" (ಜ್ಞಾನೋಕ್ತಿಗಳು 20:29). ನಾವು ಯಾವುದೇ ಹಂತದಲ್ಲಿದ್ದರೂ ನಮ್ಮ ಭಿನ್ನಾಭಿಪ್ರಾಯಗಳು ಏನೇ ಆಗಿರಲಿ ನಾವೆಲ್ಲರೂ ಕರ್ತನಿಗೆ ಮಾತ್ರವಲ್ಲ ಆದರೆ ಪ್ರತಿಯೊಬ್ಬರಿಗೂ ಸಹ ಏನಾದರೊಂದು ನೀಡಲು ಇದೆ.

**ಇದುವರೆಗೂ ನಿಮ್ಮ ಜೀವನದ ಪರಿಸ್ಥಿತಿಗಳು ಏನೇ ಆಗಿರಬಹುದು. ಬೇರೆ ಯಾರಿಗೋ ಆಶೀರ್ವಾದದಾಯಕವಾಗಲು ನೀವು ಎನು ಮಾಡಬಹುದು? ಆಶೀರ್ವಾದದಾಯಕವಾಗಿರಲು ಪ್ರಜ್ಞಾಪೂರಕ ಕ್ರಮವನ್ನು ನಿಮ್ಮ ಕುಟುಂಬದ ಯಾರಿಗಾದರೂ ಏಕೆ ಮಾಡಬಾರದು?**

**ಮಂಗಳವಾರ** **ಏಪ್ರಿಲ್ 2**

## ಅನಿರೀಕ್ಷಿತ

**ಯೋಬ 1:13–19; 2:7–9 ಯೋಬನಿಗೆ ಏನಾಯಿತು? ಒಂದು ರೀತಿಯಲ್ಲಿ ಅಥವಾ ಇನ್ನೊಂದರಲ್ಲಿ ಅಥವಾ ಒಂದು ಸಮಾದಲ್ಲಿ ಅಥವಾ ಇನ್ನೊಂದರಲ್ಲಿ ಪ್ರತಿಯೊಬ್ಬರಿಗೆ ಏನಾಗುತ್ತದೆ ಎಂಬುದನ್ನು ಅದರ ಅನುಭವವು ಯಾವ ವಿಧದಲ್ಲಿ ಪ್ರತಿಬಿಂಬಿಸುತ್ತದೆ?**

ಗ್ರೀಕ್ ತತ್ವಜ್ಞಾನಿ ಹೆರಾಕ್ಲಿಟಸ್‌ನು "ಬದಲಾವಣೆಯನ್ನು ಹೊರತುಪಡಿಸಿ ಶಾಶ್ವತವಾಗಿರುವುದು ಏನೂ ಇಲ್ಲ" ಎಂದು ಘೋಷಿಸುತ್ತಾನೆ. ಎಲ್ಲವೂ ಉತ್ತಮವಾಗಿ ನಡೆಯುತ್ತದೆ ಎಂದು ತೋರುವಾಗ ಅನಿರೀಕ್ಷಿತವಾದದ್ದು

ಸಂಭವಿಸುತ್ತದೆ. ಅದು ಉದ್ಯೋಗ ಕಳೆದುಕೊಳ್ಳದ್ದಾಗಿರಬಹುದು ಅಥವಾ ಒಂದು ಅಂಗ, ಹಾಸಿಗೆ ಹಿಡಿಯುವ ಅನಾರೋಗ್ಯ ಅಥವಾ ಬೇಗ ಸಾಯುವುದು, ಮನೆಗೆ ಬೆಂಕಿ, ಕಾರ್ ಅಪಘಾತ, ಕುಟುಂಬದ ಮುದ್ದಿನ ಪ್ರಾಣಿಯೊಂದಿಗೆ ನಡೆಯುವಾಗ ಕುಸಿದು ಬೀಳುವುದಾಗಿರಬಹುದು.

ಸಹಜವಾಗಿ, ಎಲ್ಲಾ ಬದಲಾವಣೆಗಳು ನಕಾರಾತ್ಮಕವಾಗಿ ಇರಬಾರದು. ಉದ್ಯೋಗದಲ್ಲಿ ಬಡ್ತಿ ಪಡೆಯುವುದು ಉತ್ತಮ ಆರ್ಥಿಕ ಪರಿಸ್ಥಿತಿಗಳಿಗೆ ಕಾರಣವಾಗಬಹುದು ಅಥವಾ ಬಹುಶಃ ನೀವು ನಿಮ್ಮ ಸಂಗಾತಿಯಾಗುವ ಯಾರನ್ನಾದರೂ ಭೇಟಿಯಾಗಬಹುದು. ಅನೇಕರು ಈ ಬದಲಾವಣೆಯನ್ನು ಸ್ವಾಗತಿಸುತ್ತಾರೆ. ಎರಡೂ ರೀತಿಯಲ್ಲಿ ನಾವು ನಮ್ಮ ದಿನಚರಿ, ಲಯದಲ್ಲಿ ನಿರಂತರವಾಗಿ ಮತ್ತು ಅನಿರೀಕ್ಷಿತವಾಗಿ ಆಗುವಾಗ ಇವೆಲ್ಲವನ್ನು ಅಡ್ಡಿಪಡಿಸುತ್ತದೆ.

ಯೋಬನಿಗೆ ನಿಸ್ಸಂಶಯವಾಗಿ ಜೀವನದಲ್ಲಿ ಹೊಸ ಋತುವಿನ ನಿರೀಕ್ಷೆ ಇರಲಿಲ್ಲ. ಸತ್ಯವೇದ ಆತನನ್ನು "ದೇವರಲ್ಲಿ ಭಯಭಕ್ತಿಯುಳ್ಳವನಾಗಿ ಕೆಟ್ಟದ್ದನ್ನು ನಿರಾಕರಿಸುತ್ತಾ ನಿರ್ದೋಷಿಯೂ ಯಥಾರ್ಥಚಿತ್ತನೂ ಆಗಿದ್ದನು" (ಯೋಬ 1:1) ಎಂದು ವರ್ಣಿಸುತ್ತದೆ. ಅಲ್ಲದೆ ಅವನು ಮದುವೆಯಾಗಿದ್ದನೂ ಎಂಬುದು ನಮಗೆ ತಿಳಿದಿದೆ. ಅವನಿಗೆ ಏಳು ಮಂದಿ ಗಂಡು ಮಕ್ಕಳು ಮತ್ತು ಮೂರು ಮಂದಿ ಹೆಣ್ಣು ಮಕ್ಕಳೂ ಇದ್ದರು ಮತ್ತು ತುಂಬಾ ಐಶ್ವರ್ಯವಂತನಾಗಿದ್ದನು (ಯೋಬ 1:2,3). ಪುಸ್ತಕದ ಮಧ್ಯಕ್ಕೆ ಪ್ರವೇಶಿಸುವ ಹೊತ್ತಿಗೆ, ಅವನು ಕನಿಷ್ಠ ಆರು ಪ್ರಮುಖ ನಷ್ಟಗಳನ್ನು ಅನುಭವಿಸಿದ್ದಾನೆ. ಆತನ ಆಸ್ತಿ, ಆತನ ಆಳುಗಳು ಶಕ್ತಿ, ಆತನ ಮಕ್ಕಳು, ಆತನ ಆರೋಗ್ಯ, ಆತನ ಹೆಂಡತಿಯ ಬೆಂಬಲ ಮತ್ತು ಅವನ ಸ್ನೇಹಿತರ ಪ್ರೋತ್ಸಾಹ, ಆತನ ಜಗತ್ತು ತಲೆಕೆಳಗಾಗಿ ಹೋಯಿತು ಮತ್ತು ಅವನ ಕುಟುಂಬದ ಜೀವನ ನಾಶವಾಯಿತು.

ಯೋಬನಿಗೆ ಏನಾಯಿತು ಎನ್ನುವುದು ತೀರಾ ವಿಪರೀತವಾಗಿತ್ತು. ನಕರಾತ್ಮಕ ರೀತಿಯಲ್ಲಿ ನಮ್ಮಲ್ಲಿ ಯಾರು ತುಂಬಾ ಅನಿರೀಕ್ಷಿತವಾದದ್ದನ್ನು ಅನುಭವಿಸಲಿಲ್ಲ? ಜೀವನವು ಚೆನ್ನಾಗಿಯೇ ಮುಂದುವರಿಯಬಹುದು. ಇದ್ದಕ್ಕಿದ್ದಂತೆ ಮತ್ತು ಎಚ್ಚರಿಕೆ ಇಲ್ಲದೆ ಸಂಪೂರ್ಣವಾಗಿ ಎಲ್ಲವು ಬದಲಾವಣೆಯಾದಾಗ ಮತ್ತು ನಮ್ಮ ಜೀವನ

ಮತ್ತು ಕುಟುಂಬದ ಜೀವನ ಮತ್ತೆ ಒಂದೇ ರೀತಿ ಆಗಿರಲಾರದು.

ಇದು ಹೊಸದೇನು ಅಲ್ಲ ಹೆಬೇಲನು ಬಹುಶಃ ಕೊಲೆಮಾಡುತ್ತೇನೆಂದು ನಿರೀಕ್ಷೆ ಮಾಡಿರಲಿಲ್ಲ ಮತ್ತು ಯೋಸೆಫನು ಐಗುಪ್ತದಲ್ಲಿ ಗುಲಾಮತ್ವಕ್ಕೆ ಮಾರಲ್ಪಡುತ್ತೇನೆಂದು ನಿಖರವಾಗಿ ನಿರೀಕ್ಷೆ ಮಾಡಿರಲಿಲ್ಲ. ಎರಡೂ ಕಥೆಗಳಲ್ಲೂ ಕುಟುಂಬದ ಸದಸ್ಯರು ದ್ರೋಹಗಾರರಾಗಿದ್ದರು ಮತ್ತು ಎರಡೂ ಕಥೆಗಳಲ್ಲಿಯೂ ಇತರ ಸದಸ್ಯರಿಗೆ ಏನಾಯಿತು ಎಂಬುದರ ಮೂಲಕ ಕುಟುಂಬಗಳಿಗೆ ಹೆಚ್ಚು ಪ್ರಭಾವ ಬೀರಿದ್ದವು. ಧರ್ಮಶಾಸ್ತ್ರದಲ್ಲಿ ಜನರ ಜೀವನ ಮತ್ತು ಕುಟುಂಬಗಳು ಅನಿರೀಕ್ಷಿತವಾದದ್ದರಿಂದ ರೂಪಾಂತರಗೊಂಡ ಜನರ ಉದಾಹರಣೆಗಳಿಂದ ತುಂಬಿವೆ.

**ನಿಮ್ಮ ಜೀವನದ ಲಯವನ್ನು ಅನಿರೀಕ್ಷಿತವಾಗಿ ಅಡ್ಡಿಪಡಿಸಿದ ಶೋಧನೆಗಳ ಮಧ್ಯೆ ನಿಮ್ಮ ನಂಬಿಕೆಯು ಹೇಗೆ ಸಹಾಯ ಮಾಡಿದೆ?**

**ಬುಧವಾರ** **ಏಪ್ರಿಲ್ 3**

## ಪರಿವರ್ತನೆಗಳು

ವಾಸ್ತವವಾಗಿ ಮನುಷ್ಯರು ಆಗಾಗ್ಗೆ ಪದ್ಧತಿಯ ಅಡಿಯಾಳಾಗಿದ್ದಾರೆ ಮತ್ತು ನಾವು ನಮ್ಮ ಮಾರ್ಗಗಳಿಗೆ ಹೊಂದಿಕೊಳ್ಳುತ್ತೇವೆ ಮತ್ತು ನಮಗೆ ವಯಸ್ಸಾಗುತ್ತಿದ್ದಂತೆ ಆ ಮಾರ್ಗಗಳಿಂದ ಬದಲಾವಣೆಯಾಗುವುದು ಕಠಿಣವಾಗುತ್ತದೆ.

ವಾಸ್ತವವಾಗಿ ನಾವು ಸುಲಭವಾಗಿ ಬದಲಾಗುವುದಿಲ್ಲ, ವರ್ಷಗಳಿಂದ ಎಷ್ಟು ಪತ್ನಿಯರು ದೂರು ನೀಡಿದ್ದಾರೆ. "ನಾನು ನನ್ನ ಪತಿಯನ್ನು ಬದಲಾವಣೆ ಮಾಡಲು ಪ್ರಯತ್ನಿಸಿದೆ, ಆದರೆ.....?"

ಹೇಗಾದರೂ ದೇವರು ನಮ್ಮ ವ್ಯಕ್ತಿತ್ವಗಳನ್ನು ಅಷ್ಟೇ ಅಲ್ಲ ಖಂಡಿತವಾಗಿ ನಮ್ಮ ಗುಣಗಳನ್ನು ಸಹ ಬದಲಾಯಿಸುವ ವ್ಯವಹಾರದಲ್ಲಿದ್ದಾನೆ. ಅದು ರಕ್ಷಣೆ ಯೋಜನೆಯ ಬಗ್ಗೆ ತುಂಬಾ ತಿಳಿಸುತ್ತದೆ. ದೇವರು ಆತನಲ್ಲಿ ನಮ್ಮನ್ನು ಹೊಸ ಜನರನ್ನಾಗಿ ಮಾಡುತ್ತಿದ್ದಾನೆ.

**ತಾರ್ಸಿನ ಸೌಲನಿಗೆ ಯಾವ ಮಹತ್ವದ ಬದಲಾವಣೆ ಸಂಭವಿಸಿತು ಮತ್ತು ಅದು ಹೇಗೆ ಸಂಭವಿಸಿತು? ಅಪೋಸ್ತಲರ ಕೃತ್ಯಗಳು 8:1–3; 9:1–22; ಗಲಾತ್ಯದವರಿಗೆ 1:15–17.**

ಸೌಲನು ಪವಿತ್ರಾತ್ಮದ ಪರಿವರ್ತನೆ ಪಡಿಸುವ ಶಕ್ತಿಗೆ ತನ್ನನ್ನೇ ಸಂಪೂರ್ಣವಾಗಿ ಒಪ್ಪಿಸಿಕೊಟ್ಟನು. ಅವನು ತನ್ನ ಜೀವನದ ತಪ್ಪುಗಳನ್ನು ನೋಡಿದನು ಮತ್ತು ದೇವರ ಆಜ್ಞೆಗಳ ದೂರದೃಷ್ಟಿಯ ಹಕ್ಕುಗಳನ್ನು ಗುರುತಿಸಿದನು. ಅವನು ತನ್ನ ಒಳ್ಳೆಯ ಕೃತ್ಯಗಳಿಂದ ಸಮರ್ಥನಾಗಿದ್ದೇನೆ ಎಂದು ನಂಬುವ ಒಬ್ಬ ಹೆಮ್ಮೆ ಪರಿಸಾಯನಾಗಿದ್ದನು. ಈಗ ನಮ್ರತೆ ಮತ್ತು ಸಣ್ಣ ಮಗುವಿನ ಸರಳತೆಯೊಂದಿಗೆ ದೇವರ ಮುಂದೆ ಬಾಗಿದನು. ತನ್ನ ಅನರ್ಹತೆಯನ್ನು ಒಪ್ಪಿಕೊಂಡನು ಮತ್ತು ಶಿಲುಬೆಗೇರಿಸಿದ ಮತ್ತು ಎದ್ದು ಬಂದ ರಕ್ಷಕ ಯೋಗ್ಯತೆಯನ್ನು ಸಮರ್ಥನೆ ಮಾಡಿದನು.

ಸೌಲನು ತಂದೆ ಮತ್ತು ಮಗನ ಸಂಗಡ ಸಂಪೂರ್ಣ ಸಂಪರ್ಕ ಮತ್ತು ಸಾಮರಸ್ಯವನ್ನು ಬಯಸಿದನು; ಹಾಗೂ ಕ್ಷಮಾಪಣೆ ಮತ್ತು ಅಂಗೀಕರಕ್ಕಾಗಿ ಆತನ ತೀವ್ರವಾದ ಇಚ್ಛೆಯಿಂದ ಅವನು ಪ್ರಜ್ಞಾಪೂರಕ ಮನವಿಗಳನ್ನು ಅರ್ಪಿಸಿದನು.

ಪರಿಸಾಯನ ಪಶ್ಚಾತ್ತಾಪದ ಪ್ರಾರ್ಥನೆಗಳು ವ್ಯರ್ಥವಾಗಿರಲಿಲ್ಲ. ಅವನ ಹೃದಯದ ಒಳಗಿನ ಆಲೋಚನೆಗಳು ಮತ್ತು ಭಾವನೆಗಳು ದೈವಿಕ ಅನುಗ್ರಹದಿಂದ ಪರಿವರ್ತಿಸಲ್ಪಟ್ಟವು; ಮತ್ತು ಆತನ ಶ್ರೇಷ್ಠ ಸಾಮರ್ಥ್ಯಗಳು ದೇವರ ನಿತ್ಯ ಉದ್ದೇಶದೊಂದಿಗೆ ಸಮಾಧಾನಕ್ಕೆ ತರಲಾಯಿತು. ಸೌಲನಿಗೆ ಇಡೀ ಲೋಕಕ್ಕಿಂತಲೂ ಕ್ರಿಸ್ತನ ಮತ್ತು ಆತನ ನೀತಿಯು ಮಿಗಿಲಾಯಿತು"– ಎಲೆನ್ ಜಿ ವೈಟ್ ದಿ ಆಕ್ಟ್ಸ್ ಆಫ್ ದಿ ಅಪೋಸ್ತಲ್ಸ್ ಪುಟಗಳು 119,120.

ನಮ್ಮ ಸ್ವಂತ ಪರಿವರ್ತನೆ ಕಥೆಗಳು ಸೌಲನ ಪ್ರಹಸನಾತ್ಮಕ್ಕೆ (ನಾಟಕ) ಎಲ್ಲಿಯೂ ಸಮೀಪವಾಗಿಲ್ಲ. ನಾವೆಲ್ಲರೂ ನಮ್ಮ ಕಥೆಯನ್ನು ಹೊಂದಿರಲೇಬೇಕು ನಮ್ಮನ್ನು ಬದಲಿಸಲು ನಮ್ಮ ಜೀವಿತದಲ್ಲಿ ಕರ್ತನು ಹೇಗೆ ಕೆಲಸ ಮಾಡಿದ್ದಾನೆ ಎಂಬ ಒಂದು ಅನುಭವ ನಮ್ಮನ್ನು ಒಂದು ತರಹ ಜನರನ್ನಾಗಿ ಮಾಡಿದೆ.

ನಮಗೆ ತಿಳಿದಿದೆ ನಾವು ಆಗಿರಲೇಬೇಕು. ಹೌದು. ಈ ಪ್ರಕ್ರಿಯೆಯು ದೀರ್ಘವಾಗಿರಬಹುದು ಮತ್ತು ಕೆಲವೊಮ್ಮೆ ನಾವು ಎಂದಿಗೂ ಬದಲಾಗುತ್ತೇವೆಯೇ ಎಂದು ಆಶ್ಚರ್ಯಪಡುತ್ತೇವೆ. ಅದು ಸುಲಭ ಇಂತಹ ಸಮಯಗಳಲ್ಲಿ, ಸತ್ಯವೇದದ ಎರಡು ವಾಕ್ಯಗಳನ್ನು ಧ್ಯಾನ ಮಾಡಲು ಮತ್ತು ಒಬ್ಬನ ಸ್ವಂತಕ್ಕೆ ಪಡೆಯಲು ಬಹಳ ಪ್ರಾಮುಖ್ಯವಾಗಿವೆ.

ಫಿಲಿಪ್ಪಿಯವರಿಗೆ 1:6 ಮತ್ತು ರೋಮಾಪುರದವರಿಗೆ 8:1 ಓದಿರಿ. ಆ ವಾಕ್ಯಗಳಲ್ಲಿ ಯಾವ ಎರಡು ದೊಡ್ಡ ಭರವಸೆಗಳು ಕಂಡು ಬರುತ್ತವೆ. ಕ್ರೈಸ್ತರ ಅನುಭವದಲ್ಲಿ ಅವು ಹೇಗೆ ಒಟ್ಟಿಗೆ ಹೊಂದಿಕೊಳ್ಳುತ್ತದೆ?

**ಗುರುವಾರ** **ಏಪ್ರಿಲ್ 4**

## ಸಂವಹನ / ಪರಸ್ಪರ

ಸತ್ಯವೇದವು ಸಂಬಂಧಗಳ ಪುಸ್ತಕವಾಗಿದೆ. ಇತರರೊಂದಿಗೆ ಸಂಬಂಧ ಹೊಂದಲು ದೇವರು ನಮ್ಮನ್ನು ಸೃಷ್ಟಿಸಿದನು. ವಾಸ್ತವವಾಗಿ ನಮ್ಮಲ್ಲಿ ಬರಿ ಕೆಲವರು ಸಂಪೂರ್ಣ ಪ್ರತ್ಯೇಕವಾಗಿ ಜೀವಿಸುತ್ತಿದ್ದಾರೆ. ಆರಂಭಿಕರಿಗಾಗಿ ನಮ್ಮಲ್ಲಿ ಯಾರೊಬ್ಬರು ಅಸ್ತಿತ್ವಕ್ಕೆ ಬರಲು ಸಾಧ್ಯವಾಗಿಲ್ಲ. ಆದರೆ ಬೇರೆಯವರಿಗಾಗಿ ಜನನದ ನಂತರ ನಮಗೆ ಕಾಳಜಿ ವಹಿಸುವುದಕ್ಕೆ ಇತರರು ನಮಗೆ ಬೇಕು. ಕನಿಷ್ಟ ಪಕ್ಷ ನಿಯಮಿತ ವಯಸ್ಸಿನವರೆಗೂ, ಕನಿಷ್ಟ ಪಕ್ಷ ಮೂಲತತ್ವದಲ್ಲಿದ್ದಾಗ, ನಾವು ನಮ್ಮ ಸ್ವಂತ ಅಸ್ತಿತ್ವದಲ್ಲಿರಬಹುದು ಮತ್ತು ಆದಾಗ್ಯೂ ನಮ್ಮಿಂದ ಸಾಧ್ಯವಾದರೆ ಯಾರಿಗೆ ತಾನೇ ಬೇಕು? ನಮ್ಮಲ್ಲಿ ಹೆಚ್ಚಿನವರು ಜೊತೆಯಾಗಿರುವುದನ್ನು ಮತ್ತು ಇತರ ಮನುಷ್ಯರೊಂದಿಗೆ ಒಡನಾಟ ಬೆಳೆಸಲು ಹಂಬಲಿಸಿರುತ್ತಾರೆ. ಶ್ವಾನಗಳಂತಹ ಸಾಕು ಪ್ರಾಣಿಗಳು ಸಂತೋಷಕರ ಜೊತೆಗಾರರಾಗಿರಬಹುದು. ಕೊನೆಯಲ್ಲಿ ಆಳವಾದ ಮತ್ತು ಬಹಳ ಅರ್ಥಪೂರ್ಣ ಮತ್ತು ಜೀವನ ಬದಲಾಗುವ ಪರಸ್ಪರ ಕಾರ್ಯಗಳು ಜನರಿಂದಲೇ ಬರುತ್ತವೆ. ಆಶ್ಚರ್ಯವೇನಿಲ್ಲ, ಕುಟುಂಬ ಮತ್ತು ಕುಟುಂಬದ ಸಂಬಂಧಗಳು ನಮ್ಮ ಅಸ್ತಿತ್ವಕ್ಕೆ ಬಹಳ ಮುಖ್ಯವಾಗಿದೆ. ಯಾಕೆಂದರೆ, ನಮ್ಮಲ್ಲಿ ಹೆಚ್ಚಿನವರು, ಸಾಮಾನ್ಯವಾಗಿ ಎಲ್ಲಾ ಸಮಯದಲ್ಲೂ ಇತರರೊಂದಿಗೆ ಸಂವಹನ ನಡೆಸುತ್ತಿದ್ದಾರೆ.

ಈ ಪರಸ್ಪರ ಕ್ರಿಯೆಗಳು ನಮ್ಮ ಜೀವನದ ಲಯಗಳು ಮತ್ತು ಬದಲಾವಣೆಗಳ ಮೇಲೆ ಪರಿಣಾಮ ಬೀರುತ್ತದೆ. ಅವರು ಎರಡು ರೀತಿಯಲ್ಲಿ ಕೆಲಸ ಮಾಡುತ್ತಾರೆ. ಆದರೂ ಇತರರು, ನಮ್ಮೊಂದಿಗಿನ ಅವರ ಸಂವಾದಗಳಲ್ಲಿ ನಮ್ಮ ಜೀವನವನ್ನು ಪ್ರಭಾವಿಸುತ್ತವೆ. ನಾವು ಅಷ್ಟರಲ್ಲಿ ಇತರರೊಂದಿಗೆ ನಮ್ಮ ಸಂವಾದಗಳಲ್ಲಿ ಅವರ ಜೀವನದ ಮೇಲೆ ಪ್ರಭಾವ ಬೀರಬಹುದು ಮತ್ತು ನಾವು ಅದನ್ನು ಅರಿತುಕೊಳ್ಳುತ್ತೇವೆಯೋ ಅಥವಾ ಇಲ್ಲವೋ (ಮತ್ತು ಅನೇಕ ಬಾರಿ ನಾವು ಮಾಡಲ್ಲ), ಆ ಸಂವಾದಗಳು ಎರಡೂ ದಿಕ್ಕಿನಲ್ಲಿಯೂ ಒಳ್ಳೆಯದಕ್ಕಾಗಿರಬಹುದು ಅಥವಾ ಕೆಟ್ಟದಕ್ಕಾಗಿರಬಹುದು ಎಲ್ಲಾ ಸಮಯದಲ್ಲೂ ನಾವು ಸಕ್ರಿಯವಾಗಿರುವುದು ಎಷ್ಟು ಮುಖ್ಯ. ಎಲ್ಲಾ ಸಮಯಗಳಲ್ಲೂ ಇದರಿಂದಾಗಿ ಇತರರ ಮೇಲೆ ನಮ್ಮ ಅನಿವಾರ್ಯ ಪ್ರಭಾವವು ಯಾವಾಗಲೂ ಒಳ್ಳೆಯದು. ಅದರಲ್ಲೂ ವಿಶೇಷವಾಗಿ ನಮಗೆ ಹತ್ತಿರವಾಗಿರುವವರೊಂದಿಗೆ ಮತ್ತು ಸಾಮಾನ್ಯವಾಗಿ ನಮ್ಮ ಕುಟುಂಬ ಸದಸ್ಯರ ಮೇಲೆ.

**ಈ ಕೆಳಗಿನ ವಾಕ್ಯಗಳನ್ನು ಓದಿರಿ. ಇತರರೊಂದಿಗಿನ ನಮ್ಮ ಸಂವಾದಗಳಲ್ಲಿ ಏನು ಮಾಡಲು ಅವುಗಳು ನಮಗೆ ಹೇಳುತ್ತಿವೆ? ರೋಮಾಪುರದವರಿಗೆ 15:7; ಎಫೆಸದವರಿಗೆ 4:2,32; 1 ಥೆಸಲೋನಿಕದವರಿಗೆ 3:12; ಯಾಕೋಬ 5:16**.

ಅನೇಕ ವಿಧಗಳಲ್ಲಿ ಮೂಲ ತತ್ವಗಳು ಸರಳವಾಗಿದೆ. ನಾವು ಇತರರಿಗೆ ಚೆನ್ನಾಗಿ, ದಯೆಯಿಂದ ಮತ್ತು ಸಹಾನುಭೂತಿಯಿಂದ ವರ್ತಿಸಿದರೆ ನಾವು ಅವರ ಮೇಲೆ ಸಕಾರಾತ್ಮಕ ಪ್ರಭಾವ ಬೀರುವೆವು. ನಾವು ಅವರ ಜೀವನವನ್ನು ತುಂಬಾ ಸಕಾರಾತ್ಮಕ ರೀತಿಯಲ್ಲಿ ಬದಲಿಸಬಹುದು. ಯೇಸು ಜನರ ಜೀವನವನ್ನು ಬಹಳ ಸಕಾರಾತ್ಮಕ ರೀತಿಯಲ್ಲಿ ಬದಲಾಯಿಸಿದಂತೆಯೇ ನಾವು ಇತರರಿಗೆ ಅದೇ ಮಾದರಿಯಲ್ಲಿ ಏನನ್ನಾದರೂ ಮಾಡುವುದು ಎಂತಹ ಭಾಗ್ಯವಲ್ಲವೆ. ಮತ್ತೊಮ್ಮೆ ನಾವು ನೆನಪಿನಲ್ಲಿ ಇಟ್ಟುಕೊಳ್ಳಬೇಕು; ನಮ್ಮ ಪ್ರಭಾವವು ಒಳ್ಳೆಯದಕ್ಕಾಗಿ ಅಥವಾ ಕೆಟ್ಟದಕ್ಕಾಗಿ, ಮಾರ್ಮಿಕ ರೀತಿಯಲ್ಲಿ ಹೋಗಲಿದೆ ಮತ್ತು ಎಲ್ಲಿಯೂ ಸಹ ಈ ಪ್ರಭಾವವು ಮಾರ್ಮಿಕ ಅಥವಾ ಇಲ್ಲ, ನಮ್ಮ ಕುಟುಂಬಗಳಲ್ಲಿ ಹೆಚ್ಚು ಎದ್ದು ಕಾಣುತ್ತದೆ.

**ಯೇಸುವಿನ ಮುಂದಿನ ಹೇಳಿಕೆಯನ್ನು ನೋಡಿರಿ : ಲೂಕ 11:34 ಮತ್ತು ಮಾರ್ಕ 4:24, 25. ನಾವು ಇತರರೊಂದಿಗೆ ಹೇಗೆ ಸಂವಾದ ನಡೆಸುತ್ತೇವೆ ಎನ್ನುವುದರ ಬಗ್ಗೆ ಅವುಗಳು ನಮಗೆ ಏನು ಹೇಳುತ್ತಾ ಇವೆ?**

**ಶುಕ್ರವಾರ** **ಏಪ್ರಿಲ್ 5**

**ಮುಂದಿನ ಆಲೋಚನೆ :** ಕ್ರಿಸ್ತನ ಶಿಷ್ಯರು ಆತನೊಂದಿಗೆ ಸಮಯ ಕಳೆದಂತೆ ಅವರ ಜೀವದಲ್ಲಿ ಆದ ಬದಲಾವಣೆಯ ಬಗ್ಗೆ ಊಹಿಸಿ ಅವರು ಹೆಚ್ಚಾಗಿ ಅವಿದ್ಯಾವಂತರು, ಸರಳ ಜನರು, ಯೆಹೂದಿ ನಂಬಿಕೆಯ ಬೋಧನೆಗಳಿಗೂ ಮತ್ತು ಸಂಪ್ರದಾಯಗಳಿಗೂ ಒಗ್ಗಿಕೊಂಡವರಾಗಿದ್ದರು. ಆದರೆ ಈಗ ಗಲಿಲಾಯದ ರಬ್ಬಿಗಳ ಬಳಿಯೇ ಸವಾಲು ಹಾಕುತ್ತಾರೆ. ಅವರು ಅಸೂಯೇ (ಮತ್ತಾಯ 20:20–24) ಮತ್ತು ಹೊಡೆದಾಟವನ್ನು ಅನುಭವಿಸಿದರು (ಯೋಹಾನ 3:25). ಅವರಿಗೆ ನಂಬಿಕೆಯ ಕೊರತೆ ಕಾಣುತ್ತಿತ್ತು ಮತ್ತು ಅವರು ಯೇಸುವನ್ನು ಬೊಂಕಿದರು (ಮತ್ತಾಯ 26:69–74). ಅದೇ ಸಮಯದಲ್ಲಿ ಅವರು ಆತ್ಮೀಕವಾಗಿ ಬೆಳೆಯುತ್ತಿದ್ದರು. ಆದ್ದರಿಂದ ಜನರು ಪೇತ್ರನು ಯೇಸುವಿನ ಸಂಗಡ ಇದ್ದನು ಎಂದು ಗುರುತಿಸಿದರು (ಮತ್ತಾಯ 26:73). ಪೇತ್ರ ಮತ್ತು ಯೋಹಾನರು "ಅವಿದ್ಯಾವಂತರು ಮತ್ತು ತರಬೇತಿ ಪಡೆಯದ ವ್ಯಕ್ತಿಗಳು.... ಅವರು ಯೇಸುವಿನೊಂದಿಗೆ ಇದ್ದವರು" (ಅಪೋಸ್ತಲರ ಕೃತ್ಯಗಳು 4:13) ಎಂದು ಗ್ರಹಿಸಿದಾಗ ಹಿರಿಯ ಸಭೆಯ ಸದಸ್ಯರು ಸಹ ಆಶ್ಚರ್ಯಪಟ್ಟರು. ನಾವು ಬದುಕುವ ರೀತಿಯನ್ನು ನೋಡಿದಾಗ ನಮ್ಮ ಕುಟುಂಬ ಸದಸ್ಯರು ನಾವು "ಯೇಸುವಿನೊಂದಿಗೆ ಇದ್ದೇವೆ" ಎಂದು ತಿಳಿದುಕೊಂಡರೆ, ನಮ್ಮ ಕುಟುಂಬಗಳಲ್ಲಿ ನಾವು ಹೊಂದಿರುವ ನಂಬಿಕೆಗೆ ಮೀರಿದ ವಿವಿಧ ಸಕಾರಾತ್ಮಕ ಪ್ರಭಾವದ ಕುರಿತು ಯೋಚಿಸಿ.

**ಮನೆಯಲ್ಲಿರುವ ಪ್ರಭಾವಗಳ ಕುರಿತು ಎಲೆನ್ ಜಿ ವೈಟ್‌ರವರ ಈ ಮಾತುಗಳು ಏನು ಹೇಳುತ್ತವೆ? "ಮನೆ ಸರಳವಾಗಿರಬಹುದು. ಆದರೆ ಇದು ಯಾವಾಗಲೂ ಹರ್ಷಚಿತ್ತ ಮಾತುಗಳನ್ನಾಡುವ ಸ್ಥಳವಾಗಿದೆ ಮತ್ತು ಕರುಣೆಯ ಕಾರ್ಯಗಳನು ಮಾಡಲಾಗುತ್ತದೆ. ಅಲ್ಲಿ ಆದರಣೆ ಮತ್ತು ಪ್ರೀತಿ ಅತಿಥಿಗಳಾಗಿ ತಂಗಿರುತ್ತವೆ" – ದಿ ಅಡ್ವೆಂಟಿಸ್ಟ್ ಹೋಮ್ ಪುಟ 18.**

## ಚರ್ಚಿಸಬೇಕಾದ ಪ್ರಶ್ನೆಗಳು

1. ಪ್ರಸಂಗಿ 3:1–8 ಓದಿರಿ. ಈ ವಾಕ್ಯಗಳು ಏನು ಹೇಳುತ್ತವೆ ಮತ್ತು ನಿಮ್ಮ ಸ್ವಂತ ಜೀವನ ಮತ್ತು ಅನುಭವಗಳಿಗೆ ಈ ತತ್ವವನ್ನು ಹೇಗೆ ನೀವು ಅಳವಡಿಸಿಕೊಳ್ಳಬಹುದು?
2. ತರಗತಿಯಲ್ಲಿ ನೀವು ಹಾದು ಹೋದಂತ ಜೀವನದ ಕೆಲವು ಬದಲಾವಣೆಗಳ ಅನುಭವದ ಕುರಿತು ಮಾತನಾಡಿರಿ ಮತ್ತು ನೀವು ಕಲಿತ ಪಾಠಗಳನ್ನು ಕುರಿತು ಮಾತನಾಡಿರಿ ಮತ್ತು ನೀವು ಕಲಿತು ಕೊಳ್ಳಬೇಕಾದ ಪಾಠಗಳನ್ನು ಚರ್ಚಿಸಿ, ನಿಮಗೆ ಗೊತ್ತಿರದ ಪಾಠಗಳಿಂದ ನೀವು ಏನು ಕಲಿತಿದ್ದೀರಿ? ಈ ಜೀವನ– ಬದಲಾವಣೆಯ ಅನುಭವಗಳು ನಿಮ್ಮ ಕುಟುಂಬವನ್ನು ಹೇಗೆ ಪ್ರಭಾವಿಸುತ್ತವೆ ಎಂಬುದರ ಬಗ್ಗೆಯೂ ಸಹ ಮಾತನಾಡಿರಿ. ಈ ಸಂದರ್ಭಗಳಲ್ಲಿಯೂ ಕೂಡ ನೀವು ಯಾವ ಪಾಠಗಳನ್ನು ಕಲಿಯುತ್ತೀರಿ?
3. ನೀವು ಇಂದು ಜೀವಿಸುವ ವಿಧಾನಗಳು ಯಾವುವು? ನಿಮ್ಮ ಜೀವನದ ಅವುಗಳಲ್ಲಿ (ಜೀವಿತ) ಕ್ರಿಸ್ತನಲ್ಲಿವೋ? ಅವುಗಳು (ಜೀವಿತ) ಈಗಿರುವುದಕ್ಕಿಂತ ಏನು ಭಿನ್ನವಾಗುತ್ತವೆ? ಕ್ರಿಸ್ತನು ನಮ್ಮನ್ನು ಬದಲಾಯಿಸುವ ಶಕ್ತಿಯ ಕುರಿತು ನೀವು ಏನು ಹೇಳಬೇಕು?